## ಶರವಣ ಭವನದ ಪಿ. ರಾಜಗೋಪಾಲ್ ಬದುಕಿನ ತಿರುವುಗಳು

# ಸಾಮ್ರಾಜ್ಯ ಕಟ್ಟಿದ ಚಾಯ್‌ವಾಲಾ ಹೆಣ್ಣಿಗೆ ಹಾತೊರೆದು ಹಾಳಾದ

■ ಡಿ.ಎಂ. ಘನಶ್ಯಾಮ

ಒಂದು ಕಾಲಕ್ಕೆ ಟೀ ಅಂಗಡಿ ಇಟ್ಟುಕೊಂಡಿದ್ದ ವ್ಯಕ್ತಿಯೊಬ್ಬ ಯಶಸ್ವಿ ಹೋಟೆಲ್ ಉದ್ಯಮಿಯಾಗಿ ಬೆಳೆದ ಕಥೆ ಇದು. ನಷ್ಟದಿಂದ ಮುಚ್ಚಿಹೋಗುವಂತಿದ್ದ ಹೋಟೆಲ್ ಖರೀದಿಸಿ, ಅದನ್ನು ಬಹುರಾಷ್ಟ್ರೀಯ ಕಂಪನಿಯಾಗಿ ಬೆಳೆಸಿದ ದೈತ್ಯ ಸಾಧನೆ ಈತನದು. ಆದರೆ ಯಶಸ್ಸಿನ ತುತ್ತತುದಿಯಲ್ಲಿದ್ದಾಗಲೇ ಆತನ ವ್ಯಕ್ತಿತ್ವದ ಜೊತೆಜೊತೆಗೆ ಬದುಕೂ ಕುಸಿಯಲು ಆರಂಭಿಸಿತು. 'ಮಾದರಿ ಉದ್ಯೋಗದಾತ' ತನ್ನದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರನ ಹೆಂಡತಿಯನ್ನು ಎರಡನೇ ಮದುವೆಯಾಗಿ ದಕ್ಕಿಸಿಕೊಂಡ. ಮತ್ತೊರ್ವ ನೌಕರನ ಮಗಳನ್ನು ಮದುವೆಯಾಗುವ ಪ್ರಯತ್ನದಲ್ಲಿ ಕೊಲೆಗಾರನಾಗಿ ಜೈಲುಪಾಲಾದ.

ಇಷ್ಟು ಓದುವ ಹೊತ್ತಿಗೆ ಈ ಕಥೆಯ (ಖಳ) ನಾಯಕ ಯಾರಾಗಿರಬಹುದು ಎಂಬ ಅಂದಾಜು ನಿಮಗೆ ಬಂದಿರಬಹುದು. ಇದು ಮೃದುಮೃದು ಇಡ್ಲಿ, ಗರಿಮುರಿ ದೋಸೆ, ಬಾಯಿ ಚಪ್ಪರಿಸುವಂಥ ಚಟ್ನಿ, ಮೆದುಸವಿ ವಡೆಯ ಮೂಲಕ ವಿಶ್ವದಾದ್ಯಂತ ಗ್ರಾಹಕರನ್ನು ಸೆಳೆದಿರುವ ಶರವಣ ಭವನ ಹೋಟೆಲ್ ಸಮೂಹದ ಮಾಲೀಕ ಪುನ್ನೈಯಾಡಿ (ಪಿ) ರಾಜಗೋಪಾಲ್ ಬದುಕಿನ ಕಥೆ. ಪಿ.ರಾಜಗೋಪಾಲ್‌ಗೆ ಈಗ 72ರ ಹರೆಯ. ಮದುವೆಯಾಗಲೆಂದು ಇಷ್ಟಪಟ್ಟ ಹುಡುಗಿ ಜೀವಜ್ಯೋತಿಯ ಪತಿ ಪ್ರಿನ್ಸ್ ಶಾಂತಕುಮಾರನನ್ನು ಕೊಲ್ಲಿಸಿ 18 ವರ್ಷಗಳೇ ಕಳೆದುಹೋಗಿವೆ. ನ್ಯಾಯಾಲಯಗಳಲ್ಲಿ ಎಳೆದಾಡುತ್ತಿದ್ದ, ಬಂಧನ–ಜಾಮೀನು ವರ್ತುಲಗಳಲ್ಲಿ ತಿರುಗುತ್ತಿದ್ದ ಪ್ರಕರಣಕ್ಕೆ ಇದೀಗ (ಮಾರ್ಚ್ 29) ತಾರ್ಕಿಕ ಅಂತ್ಯ ಸಿಕ್ಕಿದೆ. ಜೀವಾವಧಿ ಶಿಕ್ಷೆ ವಿಧಿಸಿರುವ ಸುಪ್ರೀಂಕೋರ್ಟ್ ಜುಲೈ 7ರ ಒಳಗೆ ಶರಣಾಗಬೇಕು ಎಂದು ತೀರ್ಪಿನಲ್ಲಿ ಹೇಳಿದೆ.

### ಥೇಟ್ ಸಿನಿಮಾ ಕಥೆ

ದೇಶಕ್ಕೆ ಸ್ವಾತಂತ್ರ್ಯ ಬಂದ ವರ್ಷದಲ್ಲಿ ತಮಿಳುನಾಡಿನ ಟ್ಯುಟಿಕೋರಿನ್ ಜಿಲ್ಲೆಯ ಪುನ್ನೈಯಾಡಿ ಗ್ರಾಮದ ಸಣ್ಣ ಮಣ್ಣಿನ ಮನೆಯಲ್ಲಿ ಹುಟ್ಟಿದವರು ರಾಜಗೋಪಾಲ್. ಆ ಹಳ್ಳಿಗೆ ಒಂದು ಬಸ್‌ಸ್ಟಾಪ್ ಕೂಡ ಇರಲಿಲ್ಲ. 7ನೇ ತರಗತಿಯಲ್ಲಿ ಶಾಲೆಗೆ ನಮಸ್ಕಾರ ಹಾಕಿ ಹೊಟ್ಟೆಪಾಡಿಗೆಂದು ಚೆನ್ನೈ ಸೇರಿಕೊಂಡರು. ಟೇಬಲ್ ಒರೆಸುವ ಕೆಲಸಕ್ಕೆ ಸೇರಿದ್ದ ಅವರು ರಾತ್ರಿ ರೆಸ್ಟೊರೆಂಟ್‌ನ ನೆಲದ ಮೇಲೆಯೇ ಮಲಗುತ್ತಿದ್ದರು. ನಿಧಾನವಾಗಿ ಟೀ ಮಾಡುವುದು ಕಲಿತು, ಸಣ್ಣದೊಂದು ಟೀ ಅಂಗಡಿ ಶುರು ಮಾಡಿದರು. ತಂದೆ ಮತ್ತು ಸಂಬಂಧಿಯೊಬ್ಬರ ನೆರವಿನಿಂದ ಚೆನ್ನೈನ ಕೆ.ಕೆ. ನಗರದಲ್ಲಿ ಅಂಗಡಿ ತೆರೆದರು. ಅಂಗಡಿಯಿದ್ದ ಎರಡು ಮಹಡಿಯ ಕಟ್ಟಡ ಖರೀದಿಸಿದ ನಂತರ ಸಾಲ ಹೆಚ್ಚಾಯಿತು. ಈ ಹಂತದಲ್ಲಿಯೇ ಅವರಿಗೆ ಹೋಟೆಲ್ ಆರಂಭಿಸುವ ಐಡಿಯಾ ಬಂದಿದ್ದು.

### ಹೋಟೆಲ್ ಐಡಿಯಾ

'ಚೆನ್ನೈನ ಕೆ.ಕೆ.ನಗರದಲ್ಲಿ ಒಂದೂ ಒಳ್ಳೇ ಹೋಟೆಲ್ ಇಲ್ಲ. ಊಟ ಮಾಡಬೇಕು ಅಂದ್ರೆ ಟಿ.ನಗರ್‌ಗೆ ಹೋಗಬೇಕು' ಎಂದು ಸೇಲ್ಸ್‌ಮನ್ ಒಬ್ಬರು 1979ರಲ್ಲಿ ರಾಜಗೋಪಾಲ್ ಬಳಿ ಅಲವತ್ತುಕೊಂಡಿದ್ದರು. ಇದಾದ ಕೆಲ ದಿನಗಳ ನಂತರ ತಿರುಪತಿಯಲ್ಲಿ ಪ್ರಸಾದ ತಿನ್ನುವಾಗ ರಾಜಗೋಪಾಲ್‌ಗೆ ಸ್ವಂತ ಹೋಟೆಲ್ ಆರಂಭಿಸುವ ಐಡಿಯಾ ಹೊಳೆಯಿತಂತೆ. ನಷ್ಟದಲ್ಲಿದ್ದ ಚಿಲ್ಲರೆ ಅಂಗಡಿ ವ್ಯವಹಾರ ಬರ್ಖಾಸ್ತುಗೊಳಿಸಿದ ರಾಜಗೋಪಾಲ್, ನಷ್ಟದಲ್ಲಿಯೇ ನಡೆಯುತ್ತಿದ್ದ 'ಕಾಮಾಕ್ಷಿ ಭವನ್' ಖರೀದಿಸಿದರು. ನಾಮಫಲಕವನ್ನು 'ಶರವಣ ಭವನ್' ಎಂದು ಬದಲಿಸಿ, ಗೆಳೆಯ ಗಣಪತಿ ಅಯ್ಯರ್ ಜೊತೆಗೂಡಿ ಗಲ್ಲಾಪೆಟ್ಟಿಗೆ ಕುಳಿತಾಗ ಕ್ಯಾಲೆಂಡರ್ 1981ರ ಡಿಸೆಂಬರ್ 14 ತೋರುತ್ತಿತ್ತು. ಮುಂದೆ ಅದೇ ರೆಸ್ಟೊರೆಂಟ್ ಭಾರತದಲ್ಲಿ 33, ವಿದೇಶಗಳಲ್ಲಿ 47 ಶಾಖೆಗಳೊಂದಿಗೆ ಅಗಾಧವಾಗಿ ಬೆಳೆಯಿತು. ಈ ಕಥೆಯನ್ನು ರಾಜಗೋಪಾಲ್ ತಮ್ಮ ಆತ್ಮಕಥೆ 'ಐ ಸೆಟ್ ಮೈ ಹಾರ್ಟ್ ಆನ್ ವಿಕ್ಟರಿ' ಕಥೆಯಲ್ಲಿ ಸೊಗಸಾಗಿ ಹೇಳಿಕೊಂಡಿದ್ದಾರೆ.

ರಾಜಗೋಪಾಲ್ ಮತ್ತು ಅವರ ಗೆಳೆಯ ಗಣಪತಿ ಅಯ್ಯರ್ ಹೋಟೆಲ್ ಆರಂಭಿಸುವ ಮೊದಲು ಜ್ಯೋತಿಷಿಯೊಬ್ಬರನ್ನು ಭೇಟಿಯಾಗಿದ್ದರು. 'ನಿಮ್ಮ ಭವಿಷ್ಯದಲ್ಲಿ ಸಮೃದ್ಧಿಯೇ ತುಂಬಿದೆ. ಅಗ್ನಿಯೊಂದಿಗಿನ ವ್ಯವಹಾರ ಮುಂದುವರಿಸಿ' ಎಂದು ಜ್ಯೋತಿಷಿ ಭರವಸೆ ಹುಟ್ಟಿಸಿದ್ದರು. ಹೋಟೆಲ್‌ನ ಆರಂಭದ ದಿನಗಳಲ್ಲಿ ರಾಜಗೋಪಾಲ್ ಮತ್ತು ಗಣಪತಿ ಬೆಳಿಗ್ಗೆ 6ರಿಂದ ರಾತ್ರಿ 11ರವರೆಗೂ ಕೆಲಸ ಮಾಡುತ್ತಿದ್ದರು. ರಾಜಗೋಪಾಲ್‌ರ ಮೊದಲ ಪತ್ನಿ ವಲ್ಲಿ (ಶಿವಕುಮಾರ್ ಮತ್ತು ಶರವಣನ್ ತಾಯಿ) ಉದ್ಯಮದ ಬೆನ್ನೆಲುಬಾಗಿದ್ದರು.

ಅಂದು ಚೆನ್ನೈನಲ್ಲಿ ಶೋಕಿಗಾಗಿ ಹೋಟೆಲ್‌ಗೆ ಹೋಗುವವರ ಸಂಖ್ಯೆ ಅಷ್ಟಾಗಿ ಇರಲಿಲ್ಲ. 'ಹೊತ್ತಿಗಿಷ್ಟು ಸಿಕ್ಕರೆ ಸಾಕು, ಹೊಟ್ಟೆ ತುಂಬಿಸಿಕೊಳ್ಳಬೇಕು' ಎನ್ನುವ ಅನಿವಾರ್ಯತೆಗಾಗಿ ಸಾಕಷ್ಟು ಜನರು ಹೋಟೆಲ್‌ಗಳಿಗೆ ತಡಕಾಡುತ್ತಿದ್ದ ಕಾಲ. ಪರಿಸ್ಥಿತಿ ಅರ್ಥ ಮಾಡಿಕೊಂಡ ರಾಜಗೋಪಾಲ್ ಗುಣಮಟ್ಟದಲ್ಲಿ ರಾಜಿಯಾಗದೆ ತಿಂಡಿಗಳ ಬೆಲೆ ಇಳಿಸಿಬಿಟ್ಟರು. 'ನಮ್ಮ ಹೋಟೆಲ್‌ನಲ್ಲಿ ತಿಂಡಿ ಖರೀದಿಸಿದರೂ ಕೇವಲ ₹1' ಎಂದು ಘೋಷಿಸಿದರು. ಅಂದಿನ ದಿನಗಳಲ್ಲಿ ರಾಜಗೋಪಾಲ್‌ಗೆ ತಿಂಗಳಿಗೆ ₹10 ಸಾವಿರ ನಷ್ಟವಾಗುತ್ತಿತ್ತಂತೆ. ಆದರೆ ಕಾಲಕ್ರಮೇಣ ಆ ನಷ್ಟದ ಬಡ್ಡಿ–ಚಕ್ರಬಡ್ಡಿಯನ್ನೂ ಮೀರಿದ ಲಾಭ ಮೇಳೈಸಿತು.